ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) 1) ಗ್ರೂಪ್ 'ಎ' ಕಿರಿಯ ಶ್ರೇಣಿಯ ಹಿರಿಯ ಉಪನ್ಯಾಸಕರ 6 ಹುದ್ದೆಗಳು ಕಳೆದ ಎರಡು ವರ್ಷಗಳಿಂದ ಖಾಲಿ ಇವೆ.

2) ಗ್ರೂಪ್ 'ಬಿ' ವೃಂದದ ಉಪನ್ಯಾಸಕರ 8 ಹುದ್ದೆಗಳು ಕಳೆದ ನಾಲ್ಕು ವರ್ಷದಿಂದ ಖಾಲಿ ಇರುತ್ತದೆ.

ಇ) ವರ್ಗಾವಣೆ ಮೂಲಕ ಆದಷ್ಟು ಶೀಘ್ರವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶಿಕ್ಷಣ ಇಲಾಖೆಯಲ್ಲಿರುವ ಸಂಶೋಧನಾ ವಿಭಾಗ.

1574 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣ ಇಲಾಖೆಯಲ್ಲಿ ಸಂಶೋಧನಾ ವಿಭಾಗದವರು ಪ್ರತಿ ವರ್ಷವೂ ಮಕ್ಕಳ ಪುಸ್ತಕವನ್ನು ಆಯ್ಕೆ ಮಾಡಿ ಇಲಾಖಾ ವತಿಯಿಂದ ಪ್ರಕಟಿಸಿ ಶಾಲೆಗಳಿಗೆ ಹಂಚುವ ಯೋಜನೆಯು ಯಾವ ವರ್ಷದಿಂದ ಜಾರಿಗೆ ಬಂದಿದೆ, ಅದಕ್ಕೆ ಖರ್ಚು ಮಾಡಿರುವ ಮೊತ್ತವೆಷ್ಟು? (1997-98ರ ವಿವರ ನೀಡುವುದು)

ಆ) ಆಯ್ಕೆ ಮಾಡಲಾದ ಪುಸ್ತಕಗಳ ಹೆಸರುಗಳೇನು, ಪುಸ್ತಕಗಳ ಲೇಖಕರುಗಳಿಗೆ ಗೌರವ ಧನವನ್ನು ನಿಗದಿಪಡಿಸಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ?

ಇ) ಪುಸ್ತಕ ಆಯ್ಕೆಗೆ ನಿಗದಿಪಡಿಸಿರುವ ಮಾನದಂಡಗಳೇನು? ಪ್ರತಿ ವರ್ಷವೂ ಈ ರೀತಿಯಲ್ಲಿ ಮಕ್ಕಳ ಪುಸ್ತಕಗಳ ಖರೀದಿ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರಿ ಯೋಚಿಸಿದೆಯೇ, ಯೋಚಿಸಿದ್ದಲ್ಲಿ ರೂಪರೇಷೆಗಳ ವಿವರ ನೀಡುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) 1996-97ನೇ ಸಾಲಿನಿಂದ ಈ ಯೋಜನೆ ಜಾರಿಗೆ ಬಂದಿರುತ್ತದೆ. 1997-98ನೇ ಸಾಲಿನಲ್ಲಿ ರೂ. 15,00,000.00 ಲಕ್ಷ ಬಿಡುಗಡೆಯಾಗಿದ್ದು ಇದರಲ್ಲಿ ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ. 4 ಲಕ್ಷ ರೂ.ಗಳು ಉಳಿತಾಯವಾಗಿದೆ.

1) ಬಾಲ ವಿಜ್ಞಾನ 2.50 ಲಕ್ಷಗಳು

2) ವಿಜ್ಞಾನ ಸಂಗಾತಿ 2.00 ಲಕ್ಷಗಳು

3) ವಿದ್ಯಾರ್ಥಿ ಯಶಸ್ಸು 6.50 ಲಕ್ಷಗಳು ಒಂದು ಕನಸಲ್ಲ

ಅ) ಆಯ್ಕೆಯಾದ ಪುಸ್ತಕಗಳು 15 ಹೆಸರುಗಳು ಈ ಕೆಳಕಂಡಂತಿದೆ :

1) ಜೊತೆಯಲ್ಲಿ ಇರುವವರು
2) ಚಿನ್ನಾರಿ
3) ಪಂಜೆಮೆಂಗೇಶರಾವ್
4) ತೋಟದ ಆಟ
5) ಕಥಾ ಕುಸುಮಗಳು
6) ಹಳ್ಳಿ ಹೇಳಿದ ಕಥೆ
7) ಕೋಗಿಲೆ ಕಿರೀಟ
8) ಮಗು ನೀ ನೆನಪಿರು
9) ಅಭಯಾರಣ್ಯದಲ್ಲಿ ಒಂದು ಅನುಭವ
10) ಹಿರಿಯರ ಕಥೆಗಳು
11) ತುಂಟರ ಕ್ರಿಕೆಟ್
12) ಚಂದಕ್ಕಿ ಮಾಮ
13) ಆಕಾಶದ ಅಂಚು
14) ನಮ್ಮ ನೆಚ್ಚಿನ ಬಾಪೂಜಿ
15) ವೀರ ಪುಟಾಣಿ

ಗೌರವ ಧನ ಒಬ್ಬರಿಗೆ 2000.00 ದಂತೆ ನಿಗದಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಶಿಶುಸಾಹಿತ್ಯ ಮಕ್ಕಳಲ್ಲಿ ಮನೋರಂಜನೆಯನ್ನು ಉಂಟು ಮಾಡುವುದರ ಜೊತೆಗೆ ಬೋಧಪ್ರದವಾಗಿರಬೇಕು ಎಂಬುದು ಮುಖ್ಯ ಉದ್ದೇಶ. ಮಕ್ಕಳಲ್ಲಿ ರಾಷ್ಟ್ರೀಯ ಮನೋಭಾವನೆ, ಪರಿಸರದ ಬಗ್ಗೆ ಕಾಳಜಿ, ಮುಂತಾದ ಉತ್ತಮ ಮೌಲ್ಯಗಳನ್ನು ಬೆಳೆಸಬೇಕೆಂಬುದು ಈ ಯೋಜನೆಯ ಉದ್ದೇಶ, ಈ ಪ್ರಮುಖ ಉದ್ದೇಶಗಳ ಆಧಾರದ ಮೇಲೆ ಪುಸ್ತಕಗಳನ್ನು ಆಯ್ಕೆ ಮಾಡಲು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಐದು ಪರಿಶೀಲನಾ ಸಮಿತಿಗಳನ್ನು ರಚಿಸಿ ಅವರಿಂದ ಆಯ್ಕೆಯಾದ ಪುಸ್ತಕಗಳನ್ನು ಅಂತಿಮವಾಗಿ ಇನ್ನೊಂದು ಪರಿಷ್ಕರಣ ಸಮಿತಿಯಲ್ಲಿ ಶ್ರೀಮತಿ ವಿ. ಗಾಯಿತ್ರಿದೇವಿ ಉಪನ್ಯಾಸಕರ ಕನ್ನಡ ವಿಭಾಗ ಎನ್.ಎಂ.ಕೆ.ಆರ್.ವಿ. ರವರ ನೇತೃತ್ವದಲ್ಲಿ ಆಯ್ಕೆ ಮಾಡಲಾಗಿದೆ. ಈ ಸಮಿತಿ ಆಯ್ದ ಪುಸ್ತಕಗಳ ಸಂಪೂರ್ಣ ಹಕ್ಕುಗಳನ್ನು ಡಿ.ಎಸ್.ಇ.ಆರ್. ಟಿ. ಇಲಾಖೆಯು ಪಡೆದು ತಾನೇ ಪ್ರಕಟಿಸುವ ಆಲೋಚನೆ ಹೊಂದಿದೆ. ಪ್ರತಿ ವರ್ಷವೂ ಈ ರೀತಿ ವಿವಿಧ ಸಂಪುಟಗಳಲ್ಲಿ ಶಿಶುಸಾಹಿತ್ಯ ಪ್ರಕಟಣೆಗೆ ಮುಂದಾಗಬೇಕೆಂಬ ಉದ್ದೇಶ ಸರ್ಕಾರ ಹೊಂದಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ದರ್ಜೆಯ ಸಹಾಯಕರ ಬಡ್ತಿ.

1575 - ಶ್ರೀ ಕುಂಬೈ ಸಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪತ್ರಾಂಕಿತ ಸಹಾಯಕರವರೆಗಿನ ಬೋಧಕೇತರ ಹುದ್ದೆಗಳಿಗೆ ನಿಯಮ 32ರ ಅಡಿಯಲ್ಲಿ ಬಡ್ತಿ ನೀಡುತ್ತಿರುವುದು ಮುಂದುವರಿದಿದೆಯಲ್ಲವೆ?